ಕಮರ್ಷಿಯಲ್ ಓ ಎಸ್ ನಂಃ **17/2020**

ದಿನಾಂಕಃ **19-01-2021** ರಂದು ಹೆಚ್ಚುವರಿ ಮುಖ್ಯ ವಿಚಾರಣೆ ಅನುಮತಿ ನೀಡಿದ್ದರಿಂದ ಪುನಃ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಸ್ ಆರ್ ಕೆ ವಕೀಲರಿಂದಃ

19. ನಾನು ನನ್ನ ಮುಂದುವರೆದ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿ ಗೊತ್ತು ಮತ್ತು ಅದನ್ನು ಓದಿ ನೋಡಿ ಸಹಿ ಮಾಡಿದ್ದೇನೆ.

ಪಾಟೀ ಸವಾಲುಃ ಶ್ರೀ ಆರ್ ಎನ್ ಎಮ್ ವಕೀಲರಿಂದಃ

20. ಕೆಲಸ ಶುರುವಾದ ಸುಮಾರು ಒಂದು ತಿಂಗಳ ನಂತರ ಗಟ್ಟಿ ಥರ ಭೂಮಿ ಇದ್ದಿದ್ದು ಗೊತ್ತಾಯಿತು. ಸುಮಾರು ಎಂಟು - ಒಂಭತ್ತು ತಿಂಗಳವರೆಗೆ ಗಟ್ಟಿ ಥರ ಭೂಮಿ ಅಗಿಯುವ ಕೆಲಸ ಮಾಡಿದ್ದೇವೆ. ಗಟ್ಟಿ ಥರ ಟೆಂಡರನಲ್ಲಿ ಕೂಡಿಲ್ಲ ಎಂಬುದು ಗೊತ್ತಾಯಿತು. ನನ್ನ ಮನವಿಯಂತೆ ಎ.ಇ.ಇ. ರವರು ಮೇಲಾಧಿಕಾರಿಯವರಿಗೆ ನಿಪಿ 3 ರಂತೆ ತಿಳಿಸಿದ್ದಾರೆ. ನಾನು ಬೇರೆ ಥರದ ಭೂಮಿ ಬಂದ ಬಗ್ಗೆ ನನ್ನ ದರವನ್ನು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಕರಾರಿನ ಅನ್ವಯ ನಾನು ಗಟ್ಟಿ ಥರ ಬಂದ ಏಳು ದಿನಗಳಲ್ಲಿ ನನ್ನ ದರವನ್ನು ಅಧಿಕಾರಿಗಳಿಗೆ ತಿಳಿಸಬೇಕಾಗಿತ್ತು ಎಂದರೆ ಸರಿ. ಹಾಗೇ ಏಳು ದಿನಗಳಲ್ಲಿ ನಾನು ತಿಳಿಸಿಲ್ಲ. ನಾನು ಹಾಗೇ ನನ್ನ ದರ ತಿಳಿಸದೇ ಇದ್ದಿದ್ದರಿಂದ ಅಧಿಕಾರಿಗಳು ಟೆಂಡರ್ ನಿಯಮದನ್ವಯ ದರ ನಿಗದಿಪಡಿಸಿದ್ದಾರೆ ಎಂದರೆ ಸರಿಯಲ್ಲ. ಇಲಾಖೆಯವರು ನನಗೆ ಕೆಲಸ ನಿಲ್ಲಿಸಲು ಹೇಳಿಲ್ಲ ಮತ್ತು ಯಾವುದೇ ಪತ್ರ ಕೊಟ್ಟಿಲ್ಲ. ಸದರಿ ಗಟ್ಟಿ ಥರಕ್ಕೆ ಇಲಾಖೆಯವರು ರೂ. 83.51 ನಿಗದಿ ಪಡಿಸಿದ್ದಾರೆ ಎಂದರೆ ಸರಿ. ಸದರಿ ದರದಂತೆ ನನಗೆ ಪೂರ್ತಿ ಸಂದಾಯ ಮಾಡಿದ್ದಾರೆ ಎಂದರೆ ಸರಿಯಲ್ಲ.

21. ನಾನು ಯಾವುದೇ ಬಿಲಗಳನ್ನು ಕೊಟ್ಟಿಲ್ಲ. ನನ್ನ ಬಳಿ ಎಮ್. ಬಿ. ಪುಸ್ತಕ ಇಲ್ಲದೇ ಇದ್ದಿದ್ದರಿಂದ ನಾನು ಬಿಲ್ ಕೊಟ್ಟಿಲ್ಲ. ಆ ಬಗ್ಗೆ ನಾನು ಇಲಾಖೆಗೆ ತಿಳಿಸಿಲ್ಲ. ಕೈಪಿಯತ್ತನ ಪ್ಯಾರಾ 7.4 ನಲ್ಲಿ ಬಿಲ್ ಕೊಟ್ಟ ಬಗ್ಗೆ ಮಾಹಿತಿ ಸರಿ ಇದೆ. ಹೊಸ ನಿಯಮದಲ್ಲಿ ಆರ್ ಎ ಬಿಲಗಳನ್ನು 60 ದಿನಗಳಲ್ಲಿ ಕೊಡಬೇಕು ಎಂದು ಹೇಳಲಾದದ್ದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ 60 ದಿನಗಳ ಸೂಕ್ತ ಸಮಯ ಎಂದು ತಿಳಿಯುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ 60 ದಿನಗಳಲ್ಲಿ ಬಿಲ್ ಪೆಮೆಂಟ ಮಾಡಿದ್ದಾರೆ ಎಂದು ನಾನು

ದಾಖಲೆ ನೋಡದೇ ಹೇಳಲಾರೆ. ಕಡಿಮೆ ದರದಂತೆ ನಿಯಾಮಾವಳಿಗಳ ಅನ್ವಯ ಹಣ ಕೊಟ್ಟಿದ್ದು, ಯಾವುದೇ ಹಣ ಹಿಡಿದುಕೊಂಡಿಲ್ಲ ಎಂದರೆ ಸರಿಯಲ್ಲ.

22. ನನ್ನ ಅರ್ಜಿ ಮೇರೆಗೆ ಹೆಚ್ಚುವರಿ ಸಮಯ ಕೊಟ್ಟಿದ್ದಾರೆ ಎಂದರೆ ಸರಿ, ಆದರೆ ನಾನು ಯಾವುದೇ ಹೆಚ್ಚುವರಿ ಹಣ ಬೇಡಬಾರದು ಎಂಬ ಕರಾರಿಗೆ ಒಳಪಟ್ಟು ಸಮಯ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಕರಾರಿಗೆ ಒಳಪಟ್ಟು, ಹೆಚ್ಚುವರಿ ಸಮಯ ಕೊಟ್ಟಿದ್ದರಿಂದ ನಾನು ಯಾವುದೇ ಹೆಚ್ಚಿನ ದರ ಕೇಳಲು ಅರ್ಹನಲ್ಲ ಎಂದರೆ ಸರಿಯಲ್ಲ.

23. ಕೆನಾಲ್ ಕಾಮಗಾರಿ ಸಂದರ್ಭದಲ್ಲಿ ಎಸ್ಟಿಮೆಟ ಮಾಡುವಾಗ ಮಣ್ಣಿನ ಥರ ಹೇಗಿದೆ ಎನ್ನುವ ಬಗ್ಗೆ ಬೋರ್ ತೆಗೆದು ನೋಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಟೆಂಡರ್ ದಾಖಲೆಗಳಲ್ಲಿ ಆ ಬಗ್ಗೆ ನಮೂದು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಎಸ್ಟಿಮೆಟ ಪ್ರಕಾರ 2,31,512 ಕ್ಯೂ.ಮೀ. ಎಂದು ಇತ್ತು ಎಂದರೆ ಸರಿ. ಸುಮಾರು 10,000/- ಕ್ಯೂ.ಮೀ. ಕಡಿಮೆ ಕೆಲಸ ಆಗಿದೆ. ರೂ. 40.96 ನ್ನು ಶೇ. 125 ಕ್ಕಿಂತ ಹೆಚ್ಚಿನ ಕೆಲಸಗಳಿಗೆ ನಿಗದಿ ಪಡಿಸಿದ್ದು ಸರಿಯಾಗಿದೆ ಎಂಬುದು ಸುಳ್ಳು. ಹೆಚ್ಚು ಹಣ ಕೊಟ್ಟಿದ್ದನ್ನು ಸ್ವೀಕರಿಸಿ, ಅದು ಕಡಿಮೆಯಾಗಿದೆ ಎಂದು ಈಗ ತಕರಾರು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚು ಹಣ ಕೊಟ್ಟಿದ್ದನ್ನು ವಾಪಸ್ಸು ಕೊಟ್ಟಿದ್ದೀರಾ ಎಂಬುದಕ್ಕೆ ಸಾಕ್ಷಿ ಆ ಬಗ್ಗೆ ಪತ್ರ ಬರೆದಿದ್ದೇನೆ ಎನ್ನುತ್ತಾರೆ. ಗಟ್ಟಿ ಕಲ್ಲು ಮತ್ತು ಮೆದು ಮಣ್ಣಿಗೆ ಸಂಬಂಧಪಟ್ಟಂತೆ ಟೆಂಡರ್ ನಿಯಮದ ಪ್ರಕಾರ ಹಣ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಟೆಂಡರ್ ಹಾಕುವಾಗ ನಾನು ಕರಾರುಗಳು ಸರಿ ಇಲ್ಲ ಎಂದು ತಕರಾರು ಮಾಡಿಲ್ಲ.

24. ಪ್ರತಿವಾದಿಗಳ ತಪ್ಪಿನಿಂದ ನನಗೆ ದಾವಾದಲ್ಲಿ 39 ಲಕ್ಷ ಹಣ ಬರಬೇಕು ಎಂದು ಸುಳ್ಳು ಮಾಗನಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಿಃ 12-07-2002 ರಂದು ನಾನು ರೂ. 125/- ರಂತೆ ಗಟ್ಟಿ ಥರಕ್ಕೆ ಮಾಗನಿ ಮಾಡಿದ್ದೇನೆ ಎಂದರೆ ಸರಿ. ಅದಕ್ಕಿಂತ ಮುಂಚೆ ಮಾಗನಿ ಮಾಡಿರಲಿಲ್ಲ. ರೂ. 125/- ರಂತೆ ಕೇಳುವುದಕ್ಕೆ ಯಾವುದೇ ಆಧಾರ ಇಲ್ಲ ಎಂದರೆ ಸರಿಯಲ್ಲ. ಹೆಚ್ಚುವರಿ ಕರಾರನ್ನು ದಿಃ 22-11-2005 ರಂದು ಬರೆದುಕೊಟ್ಟಿದ್ದೇನೆ ಎಂದರೆ ಸರಿ, ಸಾಕ್ಷಿ ಹಾಗೇ ಬರೆದು ಕೊಡದೇ ಬಿಲ್ ಕೊಡುವುದೇ ಇಲ್ಲ ಎನ್ನುತ್ತಾರೆ. ಬಿಲ್ ತೆಗೆದುಕೊಳ್ಳಲು ನಾನು ಸಹಿ ಮಾಡಿದೆ ಎಂದು ಸಾಕ್ಷಿ ಹೇಳುತ್ತಾರೆ. ನಂತರ ನಾನು ಒತ್ತಾಯದಿಂದ ಸಹಿ ಮಾಡಿಸಿದ್ದಾರೆ ಎಂದು ಪತ್ರ ಬರೆದಿದ್ದೇನೆ. ಹಣ ಪಡೆಯುವಾಗ ದರಗಳಿಗೆ ನಾನು ಒಪ್ಪಿಲ್ಲ

ಎಂದು ಬರೆದಿಲ್ಲ. ಇಲಾಖೆಯಿಂದ ಹೆಚ್ಚು ಹಣ ಪಡೆಯಲು ಸುಳ್ಳು ಕ್ಲೇಮ್ ಮಾಡಿದ್ದೇನೆ ಎಂದರೆ ಸರಿಯಲ್ಲ. ಎಮ್ ಬಿ ಪುಸ್ತಕದಲ್ಲಿ ತಪ್ಪು ಲೆಕ್ಕ ಬರೆದಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚು ಬಡ್ಡಿ ಕೇಳಿದ್ದಕ್ಕೂ ಸಹ ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

25. ಕೊನೆಯ ಬಿಲ್ ಕೊಟ್ಟ ನಂತರ ನನಗೆ ಕೊಡುವ ಹಣ ಯಾವುದೇ ಬಾಕಿ ಇರಲಿಲ್ಲ ಎಂದರೆ ಸರಿಯಲ್ಲ. ಸಿಸಿ ಲೈನಿಂಗ್ ಕೆಲಸ ಮತ್ತು ಅದಕ್ಕೆ ಸಿಮೆಂಟ ಹಣ ಪಡೆದಿದ್ದೇನೆ ಎಂದರೆ ಸರಿಯಲ್ಲ. ಸದರಿ ಲೈನಿಂಗ್ ಬಗ್ಗೆ ನಾನು ಕಳಪೆ ಕಾಮಗಾರಿ ಮಾಡಿದ್ದೇನೆ ಎಂದು ವರದಿ ಬಂದಿದ್ದರಿಂದ ಆ ಹಣ ಕಡಿಮೆ ಮಾಡಿ ಬಿಲ್ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ರೂ. 7,72,992/- ಗಳನ್ನು ಕಡಿಮೆ ಮಾಡಿ ಕೊಡಲು ನಾನು ಒಪ್ಪಿಗೆ ಸೂಚಿಸಿದ್ದೆ ಎಂದರೆ ಸರಿಯಲ್ಲ. ಸದರಿ ಹಣ 2005 ರಲ್ಲಿ ಕಡಿತ ಮಾಡಿದ್ದಾರೆ. ಸದರಿ ಹಣವನ್ನು ನಾನು ಮೂರು ವರ್ಷದ ಅವಧಿಯಲ್ಲಿ ಕೇಳಿದ್ದೇನೆ.

26. ಗಟ್ಟಿಕಲ್ಲು ಒಂದು ಕಡೆ ಹಾಕಿ, ಅದನ್ನು ಇಲಾಖೆಗೆ ತಿಳಿಸಿದ್ದೇನೆ. ಹಾಗೇ ತಿಳಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ stacking ಇಲಾಖೆಯವರು ಮಾಡಿದ್ದಾರೆ ಎಂದರೆ ಸರಿಯಲ್ಲ. ಎರಡು ಮತ್ತು ಆರನೇ ಬಿಲಗಳಲ್ಲಿ ಎರಡು ಬಾರಿ stacking charge ನ್ನು ಇಲಾಖೆಯವರು ಕಡಿತಗೊಳಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎರಡನೇ ಬಿಲನಲ್ಲಿ ಹಾಕಿದ್ದ ಚಾರ್ಜನ್ನು ಏಳನೇ ಬಿಲನಲ್ಲಿ ಬಿಡುಗಡೆ ಮಾಡಿದ್ದಾರೆ ಎಂದರೆ ಸರಿ. ಆದ್ದರಿಂದ ಇಲಾಖೆಯವರು ಯಾವುದೇ ಹಣ ಸದರಿ stacking ಬಗ್ಗೆ ಕೊಡಲು ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

27. ಟೆಂಡರ ದರಕ್ಕಿಂತ ಹೆಚ್ಚಿನ ದರ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಟೆಂಡರ್ ನಿಯಮದನ್ವಯ ಕೇಳುತ್ತಿದ್ದೇನೆ. ಹೆಚ್ಚುವರಿ ಸಮಯ ಕೊಟ್ಟಾಗ ಶೇ. 20 ರಷ್ಟು ಹೆಚ್ಚು ಹಣ ಕೊಡಬೇಕು ಎಂದು ನಾನು ಕೇಳಿಲ್ಲ. ಟೆಂಡರ್ ಅವಧಿಯಲ್ಲಿ ಕೆಲಸ ನಿಲ್ಲಿಸಿದ್ದರಿಂದ ಹೆಚ್ಚುವರಿ ಸಮಯ ಕೊಡಬೇಕಾಯಿತು ಎಂದರೆ ಸರಿಯಲ್ಲ. ಅದು ನನ್ನ ತಪ್ಪಿನಿಂದಲೇ ಆದದ್ದು ಎಂದರೆ ಸರಿಯಲ್ಲ. ಇ ಎಮ್ ಡಿ ವಾಪಸ್ಸಗೆ 11-05-2006 ರಂದು ಅರ್ಜಿ ಕೊಟ್ಟಿದ್ದೆ ಎಂಬುದು ನೆನಪಿಲ್ಲ. ಆದರೆ ಸದರಿ ಹಣ ವಾಪಸ್ಸ ಪಡೆದಿದ್ದೇನೆ. ಇ ಎಮ್ ಡಿ ಹಣ ಮೆಂಟೆನೆನ್ಸ ಸಮಯ ಮುಗಿದ ನಂತರ ಕೊಡುತ್ತಾರೆ ಎಂದರೆ ಸರಿ.

28. ಹೆಚ್ಚುವರಿ ಸಮಯದಲ್ಲಿ ನಾನು ಕೆಲಸ ಮಾಡಿದ್ದರಿಂದ, ಆ ಸಮಯಕ್ಕೆ ಯಾವುದೇ overhead charges ಗೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ದಿಃ 31-03-2006 ರಂದು ಕೊನೆಯ ಬಿಲ್ ಪಾಸ್ ಆಗಿದೆ ಎಂದರೆ ಸರಿ. ಇ ಎಫ್ ಐ ಹಣ ಕೊನೆಯ ಬಿಲನಲ್ಲಿ ಕೊಟ್ಟಿದ್ದಾರೆ. ಅದಕ್ಕಿಂತ ಮುಂಚೆ ಉಳಿದ ಹಣ ಕೊಟ್ಟಿದ್ದರು. ಸದರಿ ಉಳಿದ ಹಣ 2002 ರಲ್ಲಿಯೇ ಕೊಟ್ಟಿದ್ದರು ಎಂದರೆ ಸರಿಯಲ್ಲ. ಯಾವ ಯಾವ ಬಿಲಗಳಲ್ಲಿ ಎಷ್ಟು ಎಷ್ಟು ಹಣ ಬಂದಿದೆ ಮತ್ತು ಬರಬೇಕು ಎಂಬುದನ್ನು ಪತ್ರ ಬರೆದು ತಿಳಿಸಿದ್ದೇನೆ. ಸದರಿ ಪತ್ರಗಳನ್ನು ನೋಡದೇ ದಿನಾಂಕಗಳನ್ನು ಹೇಳಲಾರೆ. 2002 ರಲ್ಲಿ ಟೆಂಡರ್ ರೇಟ್ ಕೊಟ್ಟಿಲ್ಲ ಎಂದು ಹೇಳಿದ್ದೇನೆ. ಕ್ಲೇಮ್ ಎಂದು ಹೇಳಿಲ್ಲ. ಸರ್ವೋಚ್ಚ ನ್ಯಾಯಾಲಯದ ಎಸ್ ಎಲ್ ಪಿ ಪ್ರಕರಣದಲ್ಲಿ ನಾನು ಪಾರ್ಟಿ ಇದ್ದೆ, ಆದರೆ ನನ್ನ ವಕೀಲರ ಮೂಲಕ ಹಾಜರಾಗಿದ್ದೆ. ಕೊನೆಯ ಬಿಲ್ ದಿನಾಂಕದಿಂದ ಅಥವಾ ಚೀಫ್ ಇಂಜಿಯುನರವರ ಆದೇಶದ ದಿನದಿಂದ ಮೂರು ವರ್ಷದ ಅವಧಿಯಲ್ಲಿ ನಾನು ದಾವಾ ಹಾಕಬೇಕಾಗಿತ್ತು ಎಂದರೆ ಸರಿಯಲ್ಲ. ಹೆಚ್ಚುವರಿ ಕರಾರಿನನ್ವಯ ಇ ಎಫ್ ಐ ದರ ನಿಗದಿ ಪಡಿಸಿದ ದಿನದಿಂದ ಮೂರು ವರ್ಷದ ಅವಧಿಯಲ್ಲಿ ದಾವಾ ಹಾಕಬೇಕಾಗಿತ್ತು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಕೇಳಿ , ಅವರು ಹೇಳಿದಂತೆಯೇ ಬೆರಳಚ್ಚು ಮಾಡಿಕೊಂಡು, ನಂತರ ಓದಿ ಹೇಳಲಾಯಿತು ಎಂದು ಈ ಮೂಲಕ ಪ್ರಮಾಣಿಕರಿಸಲಾಗಿದೆ)

ಓ ಹೇ ಕೇ ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.